CC-O. In Public Domain. Digitized by eGangotri

ಕಣ್ಣಿಗೆ ಕಾಣದ ಅಣುಜೀವಿಗಳು

೧೯೬೭ ರ ಮೇ-ಜೂನ್ ತಿಂಗಳಲ್ಲಿ ಮೈಸೂರು ನಗರದಲ್ಲಿ ನಡೆದ
ವಯಸ್ಕರ ಶಿಕ್ಷಣ ಸಾಹಿತ್ಯ ರಚನಾಲಯದಲ್ಲಿ ರಚಿತವಾದುದು

ಸೈ. ವಿ. ರಘುನಾಥರಾವ್

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡು ಮಾತು

ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಓದಲು ಸರಳವಾದ ಮತ್ತು ಸ್ವಾರಸ್ಯವಾದ ಸಾಹಿತ್ಯವನ್ನು ಒದಗಿಸುವುದು ವಯಸ್ಕರಿಗೆ ಓದು ಬರಹ ಕಲಿಸುವುದಕ್ಕಿಂತ ಮುಖ್ಯವಾದುದು. ಇಲ್ಲದಿದ್ದರೆ ವಯಸ್ಕರು ಮತ್ತೆ ಅನಕ್ಷರಸ್ಥರಾಗಿ ಬಿಡುತ್ತಾರೆ. ಹಾಗೆ ಆಗದಂತೆ ಮಾಡಲು ವಯಸ್ಕರ ಶಿಕ್ಷಣ ಸಂಸ್ಥೆಗಳು ವಯಸ್ಕರಿಗೆ ಸೂಕ್ತವಾದ ಸಾಹಿತ್ಯವನ್ನು ರಚಿಸುವ ವ್ಯವಸ್ಥೆಗಳನ್ನು ಮಾಡುತ್ತಿವೆ.

ವಯಸ್ಕರ ಮನೋಭಾವ, ಆಸಕ್ತಿ ಮತ್ತು ಅಭಿರುಚಿ, ವಾಚ್ಯಶಕ್ತಿ, ಶಬ್ದಸಂಪತ್ತು–ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯವನ್ನು ರಚಿಸುವುದು ಸುಲಭವಲ್ಲ. ಈ ಕಲೆ ಒಂದು ಶಾಸ್ತ್ರವಾಗಿಯೇ ಬೆಳೆದಿದೆ, ಬೆಳೆಯುತ್ತಿದೆ. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಇದರ ಬಗ್ಗೆ ವಿಶೇಷವಾಗಿ ಸಂಶೋಧನೆ, ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಇವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಶಾಸ್ತ್ರೀಯವಾಗಿ ಸಾಹಿತ್ಯವನ್ನು ರಚಿಸಬೇಕು.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ರಾಜ್ಯ ಸರಕಾರದ ಶಿಕ್ಷಣ ಇಲಾಖೆಯ ನೆರವಿನೊಡನೆ ಈ ಕಾರ್ಯದಲ್ಲಿ ತೊಡಗಿದೆ. ಲೇಖಕರಿಗೆ ಈ ಬಗ್ಗೆ ಮುಖ್ಯವಾದ ಅಂಶಗಳನ್ನು ತಿಳಿಸುವ ಉದ್ದೇಶದಿಂದ ಸಾಹಿತ್ಯ ರಚನಾಲಯ ಗಳನ್ನು ಏರ್ಪಡಿಸುತ್ತಿದೆ.

ಮೈಸೂರು ನಗರದಲ್ಲಿ 1967ರ ಮೇ 10 ರಿಂದ ಜೂನ್ 8ರವರೆಗೆ ಅಂಥ ಒಂದು ಸಾಹಿತ್ಯ ರಚನಾಲಯ ಏರ್ಪಾಡಾಗಿತ್ತು. ಇಪ್ಪತ್ತೊಂದು ಮಂದಿ ಲೇಖಕರು ಈ ರಚನಾಲಯದಲ್ಲಿ ಭಾಗವಹಿಸಿದ್ದರು.

ಅವರು ಹೊಸದಾಗಿ ಓದು ಬರಹ ಕಲಿತ ವಯಸ್ಕರಿಗೆ ಶಾಸ್ತ್ರೀಯವಾಗಿ ಹಂತ ಹಂತವಾಗಿ ಕಾರ್ಡು, ಮಡಿಕೆ ಮತ್ತು ಪುಸ್ತಿಕೆಗಳ ರೂಪದಲ್ಲಿ ಸಾಹಿತ್ಯವನ್ನು ರಚಿಸಿದರು.

ಆ ಸಾಹಿತ್ಯ ರಚನಾಲಯದಲ್ಲಿ ತಯಾರಾದ ಪುಸ್ತಿಕೆಗಳಲ್ಲಿ ಇದು ರಚನಾ ಲಯದ ಪರವಾಗಿ ಇದನ್ನು ತಮ್ಮ ಕೈಯಲ್ಲಿಡಲು ಸಂತೋಷಿಸುತ್ತೇನೆ.

ಎಂ. ಮಲ್ಲಿಕಾರ್ಜುನಸ್ವಾಮಿ
ಅಧ್ಯಕ್ಷ
ವಯಸ್ಕರ ಶಿಕ್ಷಣ ಸಮಿತಿ

ಮೈಸೂರು
28–6–1967

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಅನಕ್ಷರಸ್ಥ ವಯಸ್ಕರು ಓದು ಬರಹ ಕಲಿತ ಮಾತ್ರಕ್ಕೆ ವಯಸ್ಕರ ಶಿಕ್ಷಣದ ಪ್ರಗತಿಯು ಸಾಧಿಸಿತು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಕಲಿತ ಓದನ್ನು ಯಾವ ಮಟ್ಟಕ್ಕೆ ಉಳಿಸಿಕೊಂಡಿದ್ದಾರೆ, ಉಳಿಸಿಕೊಳ್ಳಲು ಯಾವ ಬಗೆಯ ಪ್ರಯತ್ನ ಮಾಡುತ್ತಿದ್ದಾರೆ ಇತ್ಯಾದಿಯ ಬಗ್ಗೆ ವಯಸ್ಕರ ಶಿಕ್ಷಣ ರಂಗದ ಬಗ್ಗೆ ಆಸಕ್ತಿಯಿರುವ ಯಾರೇ ಆಗಲಿ ಇಂದು ಪ್ರಾಮಾಣಿಕವಾಗಿ ಚಿಂತಿಸಬೇಕಾದ, ಆ ದಿಕ್ಕಿನಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇಂದು ಇದೆ.

ಈ ಹಿನ್ನೆಲೆಯಲ್ಲಿ ವಯಸ್ಕರು ಕಲಿತ ಓದನ್ನು ಉಳಿಸಿಕೊಳ್ಳಲು ಓದಿನ ಮೂಲಕ ಅರಿವುಮೂಡಿ ಆತನ ಬದುಕು ಪ್ರಗತಿಯ ಕ್ರಿಯಾಶೀಲತೆಯತ್ತ ನಡೆಯಲು ಸಹಾಯಕವಾಗುವಂತೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹೊರತಂದಿರುವ ವಯಸ್ಕರಿಗೆ ಉಪಯುಕ್ತವಾದ ಅವರ ಆಸಕ್ತಿ ಅಭಿರುಚಿಗೆ ಅನುಗುಣವಾಗಿ ಓದಲು ಸುಲಭವಾದ ಅನುಭವಿ ಲೇಖಕರು ಬರೆದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಲ್ಲಿ ಈ ಕೃತಿಯೂ ಒಂದು.

ಈಗಾಗಲೇ ಹೊರಬಂದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಿಂದೇ ಜನಪ್ರಿಯವಾಗಿರುವ, ಓದುಗರಿಂದ, ಸಾಹಿತ್ಯಾಸಕ್ತರಿಂದ ನಾಡಿನಾದ್ಯಂತ ಮೆಚ್ಚುಗೆ ಪಡೆದಿರುವ ಈ ಮಾಲಿಕೆಯ ಪುಸ್ತಕಗಳಲ್ಲಿ ಒಂದು ನೂರು ಕೃತಿಗಳ ಪುನರ್‌ಮುದ್ರಣ ಕೈಗೊಳ್ಳಲಾಗಿದೆ. ಈ ಕೃತಿಗಳು ನಮ್ಮ ಉದ್ದೇಶದ ಈಡೇರಿಕೆಯಲ್ಲಿ ಸಫಲವಾಗಬಲ್ಲವು ಎಂಬ ಆಶಯ ನಮ್ಮದು.

ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು.

ದಿನಾಂಕ : 15-11-88

ದೇವನೂರು ಶಿವಮಲ್ಲು
ಅಧ್ಯಕ್ಷರು
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕಣ್ಣಿಗೆ ಕಾಣದ ಅಣುಜೀವಿಗಳು

ತಳವಾರ ರಂಗ ಸೋಮನಹಳ್ಳಿಯಲ್ಲಿ ಸುದ್ದಿ ಸಾರುವವನು. ಅಂದು ಬೆಳಿಗ್ಗೆ ಯಾವುದೋ ವಿಷಯ ಸಾರುತ್ತಾ ಹಳ್ಳಿಯ ಬೀದಿಯಲ್ಲಿ ನಡೆಯುತ್ತಿದ್ದ. ತಮಟೆ ಶಬ್ದ ಕೇಳಿ ನರಸ ತನ್ನ ಹಟ್ಟಿಯಿಂದ ಹೊರಬಂದ. ಕುತೂಹಲದಿಂದ ವಿಷಯ ಕೇಳಿದ. ರಂಗ "ಪಕ್ಕದ ಹಳ್ಳಿಗಳಲ್ಲೆಲ್ಲಾ ಕಾಲರಾ ಮಾರಿ ಬಂದಿದೆ. ಸಂಜೆಗೆ ಡಾಕ್ಟರು ಚಾವಡಿಗೆ ಬರ್ತಾರೆ. ಎಲ್ಲರೂ ಚುಚ್ಚುಮದ್ದು ಹಾಕಿಸಿಕೊಳ್ಳಬೇಕು" ಎಂದು ಸಾರುತ್ತಿದ್ದ.

ನರಸನಿಗೆ ಕುತೂಹಲ. "ಪಕ್ಕದ ಹಳ್ಳಿಗೆ ಕಾಲರಾ ಬಂದರೆ ನಾವೇಕೆ ಚುಚ್ಚುಮದ್ದು ಹಾಕಿಸಿಕೊಳ್ಳಬೇಕು. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆಹಾಕಿದರು. ಅನ್ನುವ ಹಾಗಾಯಿತು. ಚುಚ್ಚುಮದ್ದು ಹಾಕಿಸಿಕೊಂಡರೆ ರೋಗ ಬರಲ್ಲವೇ," ಎಂಬ ಕುತೂಹಲ. "ಹೇಗಿದ್ದರೂ ಸಂಜೆಗೆ ಡಾಕ್ಟರು ಬರುವರು. ಅವರನ್ನೇ ಕೇಳಿದರಾಯಿತು ಅಂದುಕೊಂಡ."

ಸಂಜೆ ಸುಮಾರು ೫ ಗಂಟೆಯ ಸಮಯ. ಚಾವಡಿಯಲ್ಲಿ ಡಾಕ್ಟರು ಆಗಲೆ ಬಹಳ ಜನಗಳಿಗೆ ಚುಚ್ಚುಮದ್ದು ಹಾಕಿದ್ದಾಗಿದೆ. ಕಾಯುತ್ತಿದ್ದವರು ನರಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಅವನ ಗೆಳೆಯರು ಮಾತ್ರ. ಕಡೆಯಲ್ಲಿ ನರಸನ ಸರದಿ ಬಂತು. ಡಾಕ್ಟರು ಅವನಿಗೂ ಚುಚ್ಚುಮದ್ದು ಹಾಕಿದರು. ಬೆಳಗಿನಿಂದ ಕಾದಿದ್ದ ಸಮಯ ಈಗ ಬಂತು. ನರಸ ಡಾಕ್ಟರಲ್ಲಿ ತನ್ನ ಸಂಶಯ ಹೇಳಿದ.

ನರಸ : ಡಾಕ್ಟರೆ, ನಾವು ಚುಚ್ಚುಮದ್ದು ಹಾಕಿಸಿ ಕೊಂಡರೆ ಕಾಲರಾ ಬರೋಲ್ಲವೇ ?



ಡಾಕ್ಟರ್ ನರಸನಿಗೂ ಚುಚ್ಚುಮದ್ದು ಹಾಕುತ್ತಿರುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾಕ್ಟರು : ಬರೋಲ್ಲ.

ನರಸ : ಅದು ಹೇಗೆ ಬರೋಲ್ಲ.

ಡಾಕ್ಟರು : ನೋಡು ನರಸ ನಿನಗೆ ಚುಚ್ಚಿರೊ ಮದ್ದಿನಲ್ಲಿ ಕಾಲರಾ ರೋಗಾಣುಗಳನ್ನು ನಾಶಪಡಿಸುವ ಶಕ್ತಿ ಇದೆ.

ನರಸ : ಕಾಲರಾ ರೋಗಾಣು ಎಂದರೇನು ?

ಡಾಕ್ಟರು : ಕಾಲರಾ ರೋಗ ಕಣ್ಣಿಗೆ ಕಾಣಿಸದ ಅಣುಜೀವಿಗಳಿಂದ ಉಂಟಾಗುವುದು.

ನರಸ : ಹಾಗಾದರೆ ಕಾಲರಾ ರೋಗ ಅಣುಜೀವಿಗಳಿಂದ ಬರುತ್ತೆ ಅನ್ನಿ.

ಡಾಕ್ಟರು : ಹೌದು ನರಸ. ಬರಿ ಕಾಲರಾ ರೋಗ ಒಂದೇ ಅಲ್ಲ. ಬಹಳ ರೋಗಗಳೂ ಅಣುಜೀವಿಗಳಿಂದ ಬರುತ್ತವೆ.

ನರಸ : ನೆಗಡಿ ಕೆಮ್ಮು ?

ಡಾಕ್ಟರು : ಹೌದು ನೆಗಡಿ, ಕೆಮ್ಮು, ಸಿಡುಬು, ದಡಾರ, ಮಲೇರಿಯಾ ಮುಂತಾದ ಎಲ್ಲಾ ರೋಗಗಳಿಗೂ ಇದೇ ಕಾರಣ.

ನರಸ : ಇದು ಕಣ್ಣಿಗೆ ಕಾಣಲ್ಲ ಅಂತೀರಲ್ಲ. ಹೇಗೆ ಇದನ್ನು ನೋಡುವುದು ;

ಡಾಕ್ಟರು : ಇದನ್ನು ನೋಡುವುದಕ್ಕೆ ಒಂದು ಯಂತ್ರ ಇದೆ. ಸಣ್ಣ ವಸ್ತುವನ್ನು ದೊಡ್ಡದಾಗಿ ನೋಡಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂತಕನ್ನಡಿ ಉಪಯೋಗಿಸುತ್ತೇವೆ. ಹಾಗೆಯೆ ಈ ಯಂತ್ರದಿಂದ ಈ ಅಣುಜೀವಿಗಳನ್ನು ನೋಡಬಹುದು. ಈ ಯಂತ್ರಕ್ಕೆ ಸೂಕ್ಷ್ಮ ದರ್ಶಕ ಯಂತ್ರ ಎಂದು ಹೆಸರು. ನರಸನಂತೆ ಅಲ್ಲಿದ್ದ ಗೆಳೆಯರಿಗೂ ಅದನ್ನು ನೋಡುವ



Sri Vidyabharathi Book Centre, Sringeri

ಈ ಯಂತ್ರದಿಂದ ಈ ಅಣುಜೀವಿಗಳನ್ನು ನೋಡಬಹುದು

CC-O. In Public Domain. Digitized by eGangotri

ಕುತೂಹಲ. ಆಗ ಡಾಕ್ಟರ್ ರಕ್ತ ಪರೀಕ್ಷೆಗೆ ತಂದಿದ್ದ ಸೂಕ್ಷ್ಮದರ್ಶಕ ಯಂತ್ರವನ್ನು ತೋರಿಸಿದರು. ಅದರಲ್ಲಿ ನೋಡಿದ ಅವರಿಗೆ ತುಂಬ ಕುತೂಹಲ.

ನರಸನಿಗೆ : ಮತ್ತೊಂದು ಸಂಶಯ, ಇಷ್ಟು ಸೂಕ್ಷ್ಮಜೀವಿಗಳು ಎಲ್ಲಿರುತ್ತವೆ. ಡಾಕ್ಟರನ್ನು ಕೇಳಿದ.

ಡಾಕ್ಟರು : ಅಣುಜೀವಿಗಳು ನಮ್ಮ ಸುತ್ತಮುತ್ತ ಇರುವ ಗಾಳಿ ನೀರು ವಾತಾವರಣದಲ್ಲೆಲ್ಲಾ ಇವೆ. ಇವು ಇರದ ಸ್ಥಳವೇ ಇಲ್ಲ. ಇವು ತುಂಬ ಶಾಖ ಅಥವಾ ಶೀತಗಳನ್ನು ತಡೆದುಕೊಂಡು ಬದುಕುವುವು.

ಒಂದು ಅಣುಜೀವಿಯಿಂದ ಅಗತ್ಯ ವಾತಾವರಣ ಸಿಕ್ಕರೆ ಕೇವಲ ೧೨ ಗಂಟೆಗಳಲ್ಲಿ ಒಂದೂವರೆ ಕೋಟಿಗೂ ಹೆಚ್ಚು ಅಣುಜೀವಿ ಉತ್ಪತ್ತಿಯಾಗುವುದು.

ನರಸ : ಎಷ್ಟೊಂದು ಅಣುಜೀವಿಗಳು ? ಅಬ್ಬಾ !

ಡಾಕ್ಟರ್ : ಒಂದು ಸೂಜಿ ಮೊನೆಯಷ್ಟು ಗಾತ್ರದ ಜಾಗದಲ್ಲಿ ಅನೇಕ ಕೋಟಿ ಜೀವಿಗಳಿರಬಲ್ಲವು ಎಂದು ತಿಳಿಸಿದರು.

ನರಸ : ಇಷ್ಟು ಅಣುಜೀವಿಗಳಿದ್ದರೂ ನಾವು ಸಾಮಾನ್ಯವಾಗಿ ಆರೋಗ್ಯವಾಗಿರುವೆವಲ್ಲ. ಅದು ಹೇಗೆ ಸಾಧ್ಯ ?

ಡಾಕ್ಟರು : ಅಣುಜೀವಿಗಳೆಲ್ಲಾ ಹಾನಿಕರವಲ್ಲ ಅವುಗಳಲ್ಲಿ ಮಾನವನಿಗೆ ಉಪಯೋಗವಾಗಿ ಇರುವ ಜೀವಿಗಳೂ ಇವೆ.

CC-O. Jagadguru Kripa Vidyaranya Bharathi Adhyayana Peetham, Shringeri

CC-O. In Public Domain. Digitized by eGangotri

೧) ಹಾನಿಕಾರಕ ಅಣುಜೀವಿ.

೨) ಉಪಕಾರಿ ಅಣುಜೀವಿ.

ನಮ್ಮ ದೇಹದ ಸುತ್ತ ಕೋಟೆಯಂತೆ ಚರ್ಮ ಇದೆ. ಸೂಕ್ಷ್ಮಜೀವಿ ಕಣ್ಣು ಮೂಗು ಬಾಯಿ ಮತ್ತು ಗಾಯಗಳಿಂದ ಪ್ರವೇಶಿಸಬೇಕು. ಆದರೆ ಕಣ್ಣು ಮೂಗು ಬಾಯಿಗಳಲ್ಲಿರುವ ದ್ರವಗಳು ಅದನ್ನು ಕೊಲ್ಲುತ್ತವೆ. ಹಾಗೂ ರೋಗಾಣು ದೇಹ ಸೇರುತ್ತವೆ. ಆಗ ರಕ್ತದಲ್ಲಿರುವ ಬಿಳಿ ರಕ್ತಕಣ ಹೋರಾಡಿ ಅವುಗಳನ್ನು ಕೊಲ್ಲುವುದು.

ನರಸ : ಕೆಲವರಿಗೆ ರೋಗ ಬರುತ್ತದೆ. ಕೆಲವರಿಗೆ ಬರುವುದಿಲ್ಲ. ಇದೇಕೆ ಹೀಗೆ.

ಡಾಕ್ಟರ್ : ಕೆಲವರಿಗೆ ಸ್ವಾಭಾವಿಕ ನಿರೋಧಕಶಕ್ತಿ ಇರುತ್ತದೆ. ಕೆಲವರಿಗೆ ಈ ಸ್ವಾಭಾವಿಕ ನಿರೋಧಕ ಶಕ್ತಿ ಇರುವುದಿಲ್ಲ. ಯಾರಿಗೆ ನಿರೋಧಕ ಶಕ್ತಿ ಇರುವುದಿಲ್ಲವೊ ಅವರಿಗೆ ರೋಗ ಬರುವುದು.

ನರಸ : ಸ್ವಾಭಾವಿಕ ನಿರೋಧಕಶಕ್ತಿ ಇಲ್ಲದಿದ್ದರೆ ಅವರೇನು ಮಾಡಬೇಕು ?

ಡಾಕ್ಟರ್ : ಅಂಥವರು ಔಷಧಿ ಸೇವನೆಯಿಂದ ರೋಗ ಪರಿಹರಿಸಿಕೊಳ್ಳಬೇಕು. ಔಷಧಿ ಕೊಡಲು ನಾವು ಇದ್ದೇವಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ನರಸ : ಅದು ಸರಿ ಡಾಕ್ಟ್ರೇ ಕಾಲರಾ ಬಂದಾಗಲೂ ಚುಚ್ಚುಮದ್ದು ಕೊಡುತ್ತೀರಾ, ಮಲೇರಿಯಾ ಬಂದರೂ ಚುಚ್ಚುಮದ್ದು ಕೊಡುತ್ತಿರಾ, ಎರಡು ಬೇರೆ ಬೇರೆ ಮದ್ದೆ ?

ಡಾಕ್ಟರ್ : ಹೌದು. ಆಯಾಯ ರೋಗಕ್ಕೆ ತಕ್ಕ ಚುಚ್ಚುಮದ್ದು ಕೊಡ್ತೀವಿ. ಕಾಲರಾ ರೋಗಾಣುವಿಂದ ಕಾಲರಾ ರೋಗ ಬರುತ್ತದೆ. ಮಲೇರಿಯಾ ರೋಗಾಣುಗಳಿಂದ ಮಲೇರಿಯಾ ಬರುವುದು. ಹಾಗೆಯೇ ಸಿಡುಬು ದಡಾರ ಇತ್ಯಾದಿ ರೋಗಗಳು ಆಯಾ ಅಣುಜೀವಿಗಳಿಂದ ಬರುವವು.

ನರಸ : ಅಲ್ಲ ಡಾಕ್ಟರೇ ಪಕ್ಕದ ಹಳ್ಳಿಯಲ್ಲಿರೋ ಕಾಲರಾ ನಮ್ಮ ಹಳ್ಳಿಗೆ ಹೇಗೆ ಬರುತ್ತೆ ?

ಡಾಕ್ಟರ್ : ನೋಡು ನರಸ ನಿನ್ನ ಪ್ರಶ್ನೆ ಬಹಳ ಜಾಣತನದ್ದು. ರೋಗ, ರೋಗಾಣುಗಳಿಂದ ಹರಡುತ್ತೆ ಅಂತ ತಿಳಿಕೊಂಡಿರುವೆ ತಾನೆ. ಈಗ ರೋಗಾಣುಗಳು ಹೇಗೆ ಹರಡುತ್ತವೆ ಅಂತ ತಾನೆ ನಿನ್ನ ಪ್ರಶ್ನೆ.

ನರಸ : ಹೌದು ಡಾಕ್ಟ್ರೇ.

ಡಾಕ್ಟರು : ನೋಡು ರೋಗಾಣುಗಳು ಅನೇಕ ರೀತಿಗಳಲ್ಲಿ ಹರಡುತ್ತವೆ. ನೀರು ಮತ್ತು ಆಹಾರದಿಂದ ಕಾಲರಾ ರೋಗ ಕಾಲರಾ ರೋಗಾಣುಗಳಿಂದ ಹರಡುತ್ತೆ ಅಂತ ತಿಳಿದಿದ್ದೀಯಾ. ಈ ರೋಗಾಣುಗಳನ್ನು ನೊಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡುತ್ತೆ. ರೋಗಿಯ ಮಲಮೂತ್ರದಲ್ಲಿ ಈ ರೋಗಾಣು ಇರುತ್ತೆ. ಅದರ ಮೇಲೆ ಕೂತ ನೊಣ ಬೇರೆಯೋರು ಉಪಯೋ



ರೋಗಾಣುಗಳನ್ನು ನೊಣಗಳು ಹರಡುತ್ತಿರುವುದು.

ಗಿಸುವ ಆಹಾರ ಪದಾರ್ಥದ ಮೇಲೆ ಕೂಡುವುದು. ಅದನ್ನು ಉಪಯೋಗಿಸಿದವರಿಗೆ ಆ ರೋಗ ಬರುವುದು.

ನರಸ : ಹಾಗಾದರೆ ನಾವು ಹುಷಾರಾಗಿರಬೇಕು ಅನ್ನಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾಕ್ಟರು : ಹೌದು ಈ ರೋಗಾಣುಗಳು ಹಳಸಿದ ಆಹಾರದಲ್ಲಿ ಇರುತ್ತವೆ. ಕೊಳೆತ ಹಣ್ಣು ಇದರ ತೌರುಮನೆ. ಆದ್ದರಿಂದ ಅವುಗಳನ್ನು ಸೇವಿಸಕೂಡದು. ಅಗ್ಗದ ಶೆಟ್ಟಿಗೆ ಮುಗ್ಗಿದ ಜೋಳ ಅನ್ನುವಂತೆ, ಕೆಟ್ಟ ಪದಾರ್ಥ ತಿಂದರೆ ಸಂಕಟ ತಪ್ಪದು. ಕಾಲರಾ ಆಮಶಂಕೆ ಈ ರೀತಿ ಬರುವುದು. ನೀರನ್ನು ಕುದಿಸಿ ಆರಿಸಿ ಉಪಯೋಗಿಸಬೇಕು.

ನರಸ : ಅಂದರೆ ನೀರು ಮತ್ತು ಆಹಾರದಿಂದ ರೋಗಾಣುಗಳು ಹರಡುತ್ತವೆ. ಅನ್ನಿ.

ಡಾಕ್ಟರು : ಹೌದು ಬರಿಯ ನೀರು ಮತ್ತು ಆಹಾರ ಮಾತ್ರವಲ್ಲ. ಗಾಳಿಯಿಂದಲೂ ರೋಗಾಣು ಹರಡುವುದು. ಡಿಫ್ತಿರಿಯಾ, ನ್ಯುಮೋನಿಯಾ ರೋಗಾಣುಗಳು ಗಾಳಿಯಿಂದ ಹರಡುವವು. ರೋಗಿಯ ಕೆಮ್ಮು, ಸೀನು ಉಗುಳಿನಿಂದ ಗಾಳಿಯಲ್ಲಿ ಈ ರೋಗಾಣುಗಳು ಸೇರುವುವು. ಅವನ್ನು ನಾವು ಸೇವಿಸಿದರೆ ನಮಗೆ ರೋಗ ತಟ್ಟುವುದು.

ನರಸ : ಅದಕ್ಕೆ ಅವರು ಕೆಮ್ಮುವಾಗ ಸೀನುವಾಗ ಕರವಸ್ತ್ರ ಇಟ್ಟುಕೊಳ್ಳುವುದು.

ಡಾಕ್ಟರು : ಹೌದು, ಅವರ ಉಗುಳನ್ನು ಕೂಡ ದೂರದ ಹಳ್ಳದಲ್ಲಿ ಹೂತ ಹಾಕಿ ಮಣ್ಣು ಮಾಡಬೇಕು.

Sri Vidyabharathi Book Centre, Sirsi

CC-O. In Public Domain. Digitized by eGangotri

ನರಸ : ಮತ್ತೆ ಕೆಲವು ರೋಗಗಳು ರೋಗಿಗಳನ್ನು ಮುಟ್ಟಿದ್ದರೆ ಬರುತ್ತಾವಲ್ಲಾ ಅದು ಹೇಗೆ ?

ಡಾಕ್ಟರ್ : ಹೌದು. ಸಿಡಬು, ದಡಾರ, ಇನ್‌ಪ್ಲೂಯೆಂಜಾ ರೋಗಗಳು ಸಂಪರ್ಕದಿಂದ ಹಬ್ಬುತ್ತವೆ.

ರೋಗಿ ಉಪಯೋಗಿಸಿದ ಪದಾರ್ಥಗಳನ್ನು ಬೇರೆಯವರು ಉಪಯೋಗಿಸಕೂಡದು ಗಾಯಗಳಿಂದ ಕೂಡ ರೋಗಾಣುಗಳು ಹರಡುತ್ತವೆ. ಅದಕ್ಕೆ ಕ್ರಿಮಿ ನಾಶಕಗಳಿಂದ ಗಾಯಗಳನ್ನು ತೊಳೆದು ಚಿಕಿತ್ಸೆ ಮಾಡಿಸ ಬೇಕು.

ನರಸ : ರೋಗ ಹರಡುವ ಸೂಕ್ಷ್ಮ ಜೀವಿಗಳ ಬಗ್ಗೆ ತುಂಬಾ ಗೊತ್ತಾಯಿತು ಡಾಕ್ಟ್ರೆ. ಅದೇನೋ ಉಪಕಾರಿ ಅಣುಜೀವಿ ಅಂದ್ರಲ್ಲ ಹಾಗೆಂದರೇನು ?

ಡಾಕ್ಟರು : ನೋಡು ಹಾನಿ ಮಾಡೋ ಹಾಗೆ ಉಪಕಾರನೂ ಅವು ಮಾಡುತ್ತವೆ. ನೀನು ಬ್ರೆಡ್ ದೋಸೆ ಇಡ್ಲಿ ತಿಂದಿದಿ ತಾನೆ ?

ನರಸ : ಓ ಓ ! ಬೇಕಾದ ಹಾಗೆ ತಿಂದಿದ್ದೇನೆ.

ಡಾಕ್ಟರು : ಅವುಗಳಿಗೆ ಮೃದುವಾಗಿ ರುಚಿಯಾಗಿರುತ್ತಲ್ಲಾ, ಅದಕ್ಕೆ ಕಾರಣ ಗೊತ್ತಿದೆಯೇ ?

ನರಸ : ನಾವು ಚೆನ್ನಾಗಿ ಮಾಡಿದರೆ ಅವು ರುಚಿಯಾಗಿರುತ್ತವೆ ಅಷ್ಟೆ ?

ಡಾಕ್ಟರು : ಅಷ್ಟೇ ಅಲ್ಲ. ನೀನು ಹಿಟ್ಟನ್ನು ಹುಳಿಯುವುದಕ್ಕೆ ಬಿಡುತ್ತೀ ತಾನೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನರಸ : ಹೌದು ಬಿಡುತ್ತೇನೆ.

ಡಾಕ್ಟರು : ಆಗ ಗಾಳಿಯಲ್ಲಿರುವ ಅಣು ಹಿಟ್ಟಿನಲ್ಲಿ ಸೇರುತ್ತೆ. ಅವು ಹಿಟ್ಟನ್ನು ಮೃದು ಮತ್ತು ರುಚಿಯಾಗಿ ಮಾಡುತ್ತವೆ.

ನರಸ : ಏನು ಸೋಜಿಗ! ಈ ಸೂಕ್ಷ್ಮ ಜೀವಿಗಳೆದು.

ಡಾಕ್ಟರು : ಅದಿರಲಿ 'ಎಲ್ಲರ ಮನೆ ದೋಸೆನೂ ತೂತು' ಅನ್ನುವ ಮಾತು ಕೇಳಿದ್ದೀ ತಾನೆ.

ನರಸ : ಕೇಳಿದ್ದೇನೆ.

ಡಾಕ್ಟರು : ಇದಕ್ಕೂ ಅಣುಜೀವಿಗಳೇ ಕಾರಣ. ಉಪ್ಪಿನಕಾಯಿಯು ರುಚಿಗೂ, ವಾಸನೆಗೂ ಇದೇ ಕಾರಣ. ಹಾಲು ಹೆಪ್ಪಾಗಿ ಮೊಸರಾಗುವುದು. ದ್ರಾಕ್ಷೆಯಿಂದ ಮದ್ಯವಾಗುವುದು. ಈ ಎಲ್ಲಾ ಕ್ರಿಯೆಗಳೂ ಅಣುಜೀವಿಗಳಿಂದ ನಡೆಯುತ್ತವೆ.

ಡಾಕ್ಟರು : ಎಲ್ಲಕ್ಕಿಂತ ಹೆಚ್ಚಾಗಿ ಈ ಅಣುಜೀವಿಯನ್ನು ರೈತನ ಗೆಳೆಯ ಅನ್ನುವರು. ನಿನಗೆ ಗೊತ್ತೇ ಈ ಮಾತು.

ನರಸ : ನಮಗೆ ಹೇಗೆ ಡಾಕ್ಟ್ರೇ ಇದು ಗೆಳೆಯ.

ಡಾಕ್ಟರು : ನಿಮ್ಮ ವ್ಯವಸಾಯಕ್ಕೆ ಗೊಬ್ಬರಬೇಕು ತಾನೆ ?

ನರಸ : ಹೌದು.

Sri Vidyabharati Book Centre, Sringeri

CC-O. In Public Domain. Digitized by eGangotri

ಡಾಕ್ಟರು : ಎಲೆ, ಕಸ, ಕಡ್ಡಿ, ಗಂಜಲ ಎಲ್ಲವನ್ನು ಈ ಅಣುಜೀವಿ ಕೊಳೆಯುವಂತೆ ಮಾಡುವುದು. ಆಗ ನಿಮಗೆ ಹಸನಾದ ಗೊಬ್ಬರ ದೊರಕುವುದು. ಈಗ ಹೇಳು. ಇದು ಗೆಳೆಯ ಹೌದೋ ಅಲ್ಲವೋ.

ನರಸ : ಹೌದು ನೀವು ಹೇಳುವ ಮಾತು ಸರಿ.

ಡಾಕ್ಟರು : ಇನ್ನು ಒಂದು ವಿಷಯ. ನೀನು ಕಡ್ಲೆಕಾಯಿ ಗಿಡದ ಬೇರು ನೋಡಿದ್ದಿಯಾ ತಾನೆ ?

ನರಸ : ನೋಡಿಲ್ಲದೆ ಏನು.

ಡಾಕ್ಟರು : ಬೇರಿನಲ್ಲಿ ಕೆಲವು ಗಂಟುಗಳಿವೆ.

ನರಸ : ಹೌದು ಹಾಗೆಯೇ ಹುರುಳಿ ಗಿಡ, ಅವರೆ ಗಿಡ ಮುಂತಾದವುಗಳಲ್ಲೂ ಇದೆ.

ಡಾಕ್ಟರು : ನೋಡು ಆ ಬೇರಿನ ಗಂಟುಗಳಲ್ಲಿ ಸೂಕ್ಷ್ಮ ಜೀವಿಗಳಿವೆ. ಸಸ್ಯಕ್ಕೆ ಬೇಕಾದ ಪೋಷಕಾಂಶವನ್ನು ಅವು ಒದಗಿಸಿಕೊಡುವುವು.

ನರಸ : ಪೋಷಕಾಂಶ ಅಂದರೇನು ?

ಡಾಕ್ಟರು : ನಮಗೆ ಬೆಳವಣಿಗೆಗೆ ಅಗತ್ಯವಾದ ಅಂಶಗಳು ಬೇಕು. ಅದಕ್ಕೆ ಪೋಷಕಾಂಶ ಎಂದು ಹೆಸರು. ಹಾಗೆಯೇ ಸಸ್ಯಗಳ ಬೆಳವಣಿಗೆಗೂ ಬೇಕು. ಅವಕ್ಕೆ ಪೋಷಕಾಂಶ ಎಂದು ಹೆಸರು.

ನರಸ : ಈಗ ನಿಜವಾಗಿಯೂ ಅಣುಜೀವಿ ನಮ್ಮ ಗೆಳೆಯ ಡಾಕ್ಟ್ರೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾಕ್ಟರು : ಇದು ಬರಿ ನಿಮ್ಮ ಗೆಳೆಯ ಅಲ್ಲ. ನಮ್ಮ ಗೆಳೆಯ ಕೂಡ.

ನರಸ : ಹಾಗೆಂದರೆ ?

ಡಾಕ್ಟರು : ಪೆನ್ಸಿಲಿನ್ ಔಷಧಿ ಹೆಸರು ಕೇಳಿದ್ದೀಯಾ.

ನರಸ : ಹೌದು ಕೇಳಿದ್ದೀನಿ.

ಡಾಕ್ಟರು : ಪೆನ್ಸಿಲಿನ್ ಮತ್ತು ಅಂತಹ ಅನೇಕ ಔಷಧಿಗಳನ್ನು ಈ ಅಣುಜೀವಿಗಳಿಂದ ತಯಾರಿಸುತ್ತಾರೆ. ಇದು ಇನ್ನೊಂದು ವಿಷಯ ನರಸ. ಇದು ಕೊಳೆಯನ್ನು ಆಹಾರವಾಗಿ ತೆಗೆದುಕೊಳ್ಳುತ್ತದೆ. ಆದ್ದರಿಂದ ಕೊಳೆಯ ನಿರ್ಮೂಲ ಮಾಡುವುದು. ಅದಕ್ಕೆ ಇದನ್ನು ಪ್ರಕೃತಿಯ ಜಲಗಾರ ಎನುತ್ತಾರೆ.

ನರಸ : ಅಂದರೆ ಅಣುಜೀವಿಗಳು ನಮಗೆ, ನಿಮಗೆ ಎಲ್ಲರಿಗೂ ಗೆಳೆಯ ಆಯಿತು ಅನ್ನಿ.

ಡಾಕ್ಟರು : ಹೌದು ಇದು ಭಯಂಕರ ಶತ್ರು ವಿದ್ದಂತೆ ಉಪಯುಕ್ತ ಮಿತ್ರ ಕೂಡ. ಉಪಯುಕ್ತವಾದ ಅಣುಜೀವಿಗಳನ್ನು ಅನುಕೂಲವಾದಂತೆ ಉಪಯೋಗಿಸಿಕೊಳ್ಳಬೇಕು. ಹಾಗೆಯೇ ಈ ಅಪಾಯಕರವಾದ ಅಣುಜೀವಿಗಳಿಂದ ಪಾರಾಗಬೇಕು. ಅವು ನಮ್ಮನ್ನು ಸೇರದಂತೆ ನೋಡಿಕೊಳ್ಳಬೇಕು. ಅವುಗಳ ವಾಹನಗಳಾದ ನೊಣ, ಸೊಳ್ಳೆಗಳನ್ನು ನಾಶಪಡಿಸಬೇಕು. ಸಾಂಕ್ರಾಮಿಕ ರೋಗಗಳನ್ನು ಅವರು ಉಪಯೋಗಿಸುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಟ್ಟೆ ಆಹಾರ ವಸ್ತುಗಳನ್ನು ದೂರವಾಗಿ ಇಡಬೇಕು. ರೋಗ ತರುವ ಸೂಕ್ಷ್ಮ ಜೀವಿಗಳು ನಮ್ಮ ಕೇರಿಗಳ ಹತ್ತಿರ ಇರುವುದು ಗೊತ್ತಾದಾಗ ಅವುಗಳನ್ನು ಎದುರಿಸಲು ನಾವು ಸೂಜಿಮದ್ದುಗಳನ್ನು ತೆಗೆದುಕೊಳ್ಳಬೇಕು. ಹೀಗೆ ಇರುವ ಸೂಜಿಮದ್ದುಗಳು ಸಿಡಬುರೋಗ, ಕಾಲರಾ, ಪ್ಲೇಗು, ಈಗ ಕ್ಷಯ ರೋಗಕ್ಕೂ ಈ ತರಹದ ಸೂಜಿಮದ್ದು ಬಂದಿದೆ.

ನರಸ :—ಅಬ್ಬಾ ! ಎಷ್ಟು ಹೊಸ ವಿಷಯ ತಿಳಿಸಿದಿರಿ ಡಾಕ್ಟರೇ. ನಿಮಗೆ ವಂದನೆಗಳು.

Sri Vidyabharathi Book Centre, Sringeri